ಕೊಟ್ಟಂಥದ್ದು ಇದೆ. ಹೀಗೆ ಒಟ್ಟು 26 ಯೋಜನೆಗಳಿಗೆ ಒಟ್ಟು 161 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಈ ಯೋಜನೆಗಳನ್ನು ಮುಗಿಸಿದ್ದೇವೆ, ಎಷ್ಟು ಹಣವನ್ನು ತೊಡಗಿಸಿದ್ದೇವೆ ಎಂದು ಕೂಡ ತಿಳಿಸುತ್ತೇನೆ. ನೀರಾವರಿಗೆ ಬರತಕ್ಕಂಥ ಬಡ್ಜೆಟ್‌ನಲ್ಲಿ ಸುಮಾರು ಮೂವತ್ತು ಭಾಗದ ಹಣ ಮಾನ್ಯ ನಾಗೇಗೌಡರಿಗೆ ಹೋಗುತ್ತದೆ. ನಮಗೆ ಪ್ರತಿ ವರ್ಷಕ್ಕೆ ಬರತಕ್ಕಂಥ ಹಣ ಕೇವಲ 71 ಕೋಟಿ ರೂಪಾಯಿ ಮಾತ್ರ. ಅದರಲ್ಲೇ ನಾವು ಎಲ್ಲರಿಗೂ ನೀರನ್ನು ಕೊಡಬೇಕು. ಪಟ್ಟಣಗಳಲ್ಲಿ ಸುಮಾರು ಒಂದು ಕೋಟಿ ಹತ್ತು ಲಕ್ಷ ಜನರಿದ್ದಾರೆ, ನೀರಿನ ಅವಶ್ಯಕತೆ ತುಂಬಾ ಇದೆ. ಇವೊತ್ತು ಒಂದೊಂದು ಯೋಜನೆಗೆ ಸುಮಾರು ಮೂವತ್ತರಿಂದ ಮೂವತ್ತಾರು ಕೋಟಿ ರೂಪಾಯಿ ಖರ್ಚಾಗುತ್ತದೆ. ಬಿಜಾಪುರದ ಕುಡಿಯುವ ನೀರಿನ ಯೋಜನೆಗೂ ಕೂಡ 36 ಕೋಟಿ ರೂಪಾಯಿ ಖರ್ಚಾಗಿದೆ. ಮೈಸೂರಿನಲ್ಲಿ ಎರಡನೇ ಹಂತ, ಮೂರನೇ ಹಂತ ಹಾಗೂ ನಾಲ್ಕನೇ ಹಂತವನ್ನು ತೆಗೆದುಕೊಂಡಿದ್ದೇವೆ. ಮಂಗಳೂರಿನಲ್ಲಿ ಎರಡನೇ ಹಂತ, ಮೂರನೇ ಹಂತವನ್ನು ತೆಗೆದುಕೊಂಡಿದ್ದೇವೆ. ಅವುಗಳಿಗೆಲ್ಲ ಹಣವನ್ನು ಒದಗಿಸಬೇಕು. ಹಣವನ್ನು ಬೇರೆ ಬೇರೆ ಹಣಕಾಸಿನ ಸಮಸ್ಯೆಯ ಜೊತೆಗೆ ನಾವು ಟೈ-ಅಪ್ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಹುಡ್ಕೊ, ವರ್ಲ್ಡ್ ಬ್ಯಾಂಕ್, ಎಲ್. ಐ. ಸಿ. ಎಲ್ಲೆಲ್ಲಿಂದ ಹಣ ಬರುತ್ತದೆ ಅದನ್ನೆಲ್ಲವನ್ನೂ ಜೋಡಣೆ ಮಾಡಿಕೊಂಡು ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಸವಣೂರಿನ ಬಗ್ಗೆ ಅವರ ಏನು ಆಸೆ ಇದೆ, ಅದಕ್ಕೆ ಇನ್ನು 12-13 ಕೋಟಿ ರೂಪಾಯಿ ಖರ್ಚಾದರೂ ಪರವಾಗಿಲ್ಲ ಅದನ್ನು ಸೇರಿಸಿ ಆ ಯೋಜನೆಯನ್ನು ಮಾಡಿ ಕೊಡುತ್ತೇವೆ. ಆದರೆ ಬಂಕಾಪುರ ಮಾತ್ರ ಸಾಧ್ಯವಿಲ್ಲವೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಮಂಜುನಾಥ್. ಸಿ. ಕುನ್ನೂರ್ :- ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇದು 1991 ರಲ್ಲಿ ಪ್ರಾರಂಭವಾಗಿದೆ ನಾವು ಈಗ 1998ರಲ್ಲಿ ಇದ್ದೇವೆ. ಏಳು ವರ್ಷವಾಯಿತು. ನಾಗನೂರು ಕೆರೆಯ ಆಳದಿಂದ ಸಾಕಷ್ಟು ನೀರು ಸಂಗ್ರಹವಾಗಿದೆ. ವರಹಾ ನದಿಯಿಂದ ನೀವು ನೀರನ್ನು ತರುವುದಕ್ಕೆ ಲೀಟ್ ಆದರೂ ಪರವಾಗಿಲ್ಲ ಇವೊತ್ತು ಆ ಶಿಗ್ಗಾಂವ್ ನಾಗನೂರ್ ಕೆರೆಯಿಂದ ತಾವು ಸವಣೂರಿಗೆ 12 ಕಿ.ಮೀ. ಪೈಪ್‌ಲೈನ್‌ನ್ನು ಮತ್ತು ಅಲ್ಲಿ ಒಂದು ಪ್ಯೂರಿಫಿಕೇಶನ್ ಪ್ಲ್ಯಾಂಟ್‌ನ್ನು ಮಾಡಿ. ಅದಕ್ಕೆ ತಾವು ಎರಡು ಮೂರು ಸಾರಿ ಟೆಂಡರನ್ನು ಕರೆದಿದ್ದೀರಿ. ಆದರೆ ಒಂದು ಸಾರಿ ಕೂಡ ಅದನ್ನು ಆಕ್ಸೆಪ್ಟ ಮಾಡಿಕೊಂಡಿಲ್ಲ. ತಾವು ಯಾರಿಗಾದರೂ ಕೊಡಿ. ಆದರೆ ಅಲ್ಲಿ ಪ್ಯೂರಿಫಿಕೇಶನ್ ಪ್ಲ್ಯಾಂಟನ್ನು ಮಾಡಿಸಿ, ಪೈಪ್‌ಲೈನ್ ಹಾಕಿಸಿ ಆ ಕೆಲಸವನ್ನು ಈ ವರ್ಷ ಮಾಡಿಕೊಡಬೇಕೆಂದು ಇನ್ನೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡರು :- ಕೋರ್ಟಿನ ತೀರ್ಮಾನವನ್ನು ಮುಗಿಸಿಕೊಂಡು ಆ ಕೆಲಸವನ್ನು ಮುಗಿಸುತ್ತೇವೆ.

(ಆ) ರಾಜ್ಯದಲ್ಲಿರುವ ಏಕ ಉಪಾಧ್ಯಾಯ ಶಾಲೆಗಳಿಂದ ತುಮಕೂರು ಜಿಲ್ಲೆಯಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ತೊಂದರೆ

ಶ್ರೀ ಬಿ. ನಂಜಾಮರಿ (ತಿಪಟೂರು) :- ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಏಕೋಪಾಧ್ಯಾಯ ಶಾಲೆಗಳು ಎಷ್ಟು ಇವೆ? ಹಾಗೂ ತಮ್ಮ ತುಮಕೂರು ಜಿಲ್ಲೆಯಲ್ಲಿ ಹಾಗೂ ನಮ್ಮ ತಿಪಟೂರು ತಾಲ್ಲೂಕಿನಲ್ಲಿ ಎಷ್ಟು ಇವೆ ಎಂದು ಸರ್ಕಾರದ ಗಮನವನ್ನು ಸೆಳೆಯ ಬಯಸುತ್ತೇನೆ.

★ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಅಧ್ಯಕ್ಷರೆ, 1997-98ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ 1469 ಪ್ರಾಥಮಿಕ ಶಾಲೆಗಳು ಸೇರಿ ರಾಜ್ಯದಲ್ಲಿ ಒಟ್ಟು 2198 ಏಕೋಪಾಧ್ಯಾಯ ಶಾಲೆಗಳಿರುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಜನ ವಸತಿ ಕೇಂದ್ರಗಳಿಗೂ ಗಡಿ ಪ್ರದೇಶಕ್ಕೆ ಶಾಲೆಗಳು ನೀಡುವಾಗ ಶಾಖಾ ಶಾಲೆಗಳ ನೀಡಿದ್ದರಿಂದ ನಂತರ ಶಿಕ್ಷಕರ ಮಂಜೂರಾತಿ ನೀಡಲಾಗುತ್ತಿದೆ. ಪ್ರಾರಂಭದ ವರ್ಷಗಳಲ್ಲಿ ಏಕೋಪಾಧ್ಯಾಯರನ್ನು ಜನೀಡಿ ವಿದ್ಯಾರ್ಥಿಗಳ ಸಂಖ್ಯೆ : 40ಕ್ಕಿಂತ ಅಧಿಕವಾದ 2ನೇ ಶಿಕ್ಷಕರನ್ನು ನೀಡಲಾಗುತ್ತಿದೆ. ತುಮಕುರು ಜಿಲ್ಲೆಯಲ್ಲಿ 503 ಏಕೋಪಾಧ್ಯಾಯ ಶಾಲೆಗಳಿದ್ದು ಇವುಗಳಲ್ಲಿ 147 ಪ್ರಾಥಮಿಕ ಶಾಲೆಗಳು 1997-98ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಿರುವಂತಾಗಿರುತ್ತವೆ.

ತಿಪಟೂರು ತಾಲ್ಲೂಕಿನಲ್ಲಿ 106 ಏಕೋಪಾಧ್ಯಾಯ ಶಾಲೆಗಳಿರುತ್ತವೆ. ಇವುಗಳಲ್ಲಿ 1997-98ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ 6 ಮತ್ತು 1996-97ನೇ ಸಾಲಿನಲ್ಲಿ ಪ್ರಾರಂಭವಾದ 3 ಶಾಲೆಗಳಾಗಿ (11) ಪ್ರಾರಂಭವಾಗಿದ್ದರಿಂದ ನಂತರ ಪಕ್ಕಾ ಶಾಲೆಯಾಗಿ ಪರಿವರ್ತಿಸಲು ಯೋಜನೆಯಡಿ ಮಂಜೂರಾದ ಹುದ್ದೆಗಳನ್ನು ನೀಡಲಾಗಿದೆ. ಎರಡು ಕಾರಣಗಳಿಂದ ಈ ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿ ಉಳಿದಿರುತ್ತವೆ.

1. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ : 40 ಕ್ಕಿಂತ ಕಡಿಮೆ ಇದ್ದಂತಹವು

2. ಇತ್ತೀಚಿನ ವರ್ಷಗಳಲ್ಲಿ ಪ್ರಾರಂಭವಾಗಿರುವ ಶಾಲೆಗಳು;

ಈ ಏಕೋಪಾಧ್ಯಾಯ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಅಧಿಕವಿರುವಂತಹ ಶಾಲೆಗಳಿಗೆ ಹೆಚ್ಚುವರಿ ಶಿಕ್ಷಕರ ಬೇರೆ ಶಾಲೆಗಳಿಂದ ನಿಯೋಜಿಸಿ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳ ಸಂಖ್ಯೆ : 40 ಕ್ಕಿಂತ ಅಧಿಕವಿರುವ ಶಾಲೆಗಳಿಗೆ 1998-99ನೇ ಸಾಲಿನಲ್ಲಿ ಮತ್ತೊಬ್ಬರು ಶಿಕ್ಷಕರನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು ಉಳಿದ ಏಕೋಪಾಧ್ಯಾಯ ಶಾಲೆಗಳನ್ನು ಯೋಜನೆಯಡಿ ಹುದ್ದೆ ಮಂಜೂರಾದಂತೆ ಹಂತ ಹಂತವಾಗಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಬಹು ಉಪಾಧ್ಯಾಯ ಶಾಲೆಗಳಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು.

4.20 ಪಿ.ಎಂ.

ಶ್ರೀ ಬಿ. ನಂಜಾಮರಿ :- ಮಾನ್ಯ ಅಧ್ಯಕ್ಷರೆ, ತುಮಕುರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ 503 ಏಕೋಪಾಧ್ಯಾಯ ಶಾಲೆಗಳಿದ್ದು ಅದರಲ್ಲಿ 106 ಏಕೋಪಾಧ್ಯಾಯ ಶಾಲೆಗಳು ನಮ್ಮ ತಾಲ್ಲೂಕು ಒಂದರಲ್ಲೇ ಇವೆ. ಒಂದೊಂದು ಊರಿನಲ್ಲಿ 1 ನೇ ತರಗತಿಯಿಂದ 4 ನೇ ತರಗತಿಯವರೆಗೆ 30 ರಿಂದ 40 ಹುಡುಗರು ಮಾತ್ರ ಇರುತ್ತಾರೆ, ಇಂಥಾ ಕಡೆ ಒಬ್ಬನೇ ಉಪಾಧ್ಯಾಯ ಯಾವ ರೀತಿ ಪಾಠ ಹೇಳಿಕೊಡುವುದಕ್ಕೆ ಸಾಧ್ಯವಿದೆ? ಮೇ ತಿಂಗಳಿನಲ್ಲಿ ಶಾಲೆಗಳು ಪ್ರಾರಂಭವಾಗುವ ಸಮಯದಲ್ಲಾದರೂ ನಮ್ಮ ತಾಲ್ಲೂಕಿನಲ್ಲಿರುವ 106 ಏಕೋಪಾಧ್ಯಾಯ ಶಾಲೆಗಳ ಪೈಕಿ 75ರ ಪರ್ ಸೆಂಟ್‌ನಷ್ಟಾದರೂ ಹೆಚ್ಚುವರಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಗಡಿ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸರ್ಕಾರ ತೆರೆಯುತ್ತಿದೆ. 40 ವಿದ್ಯಾರ್ಥಿಗಳು ಮತ್ತು ಅದಕ್ಕಿಂತ ಕಡಿಮೆ ಇರತಕ್ಕಂಥ ಶಾಲೆಗಳಲ್ಲಿ ಏಕ ಉಪಾಧ್ಯಾಯರನ್ನು ಮಾತ್ರ ನೇಮಕ ಮಾಡಲಾಗುತ್ತದೆ. ಕೆಲವು

ಸಂದರ್ಭಗಳಲ್ಲಿ 1 ನೇ ತರಗತಿಯಿಂದ 4 ನೇ ತರಗತಿಯವರೆಗೆ ಒಟ್ಟಾರೆ ವಿದ್ಯಾರ್ಥಿಗಳ ಸಂಖ್ಯೆ : 35-36 ಇರತಕ್ಕಂಥ ಸಂದರ್ಭಗಳೂ ಇವೆ. ಆಮೇಲೆ , 40 ವಿದ್ಯಾರ್ಥಿಗಳಿಗಿಂತ ಜಾಸ್ತಿ ಆಗುವ ಸಂಭವವೂ ಇರುತ್ತದೆ. ಇವತ್ತಿನ ದಿವಸಗಳಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳಿಗೆ ಹೋಗತಕ್ಕಂಥಾದ್ದನ್ನು ನಾವು ಗಮನಿಸಿದ್ದೇವೆ. ಹಾಗೆ 40 ವಿದ್ಯಾರ್ಥಿಗಳಿಂಥ ಜಾಸ್ತಿ ಇರುವ ಕಡೆಗೆ ಉಪಾಧ್ಯಾಯರುಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಶಾಲೆಗಳಿಂದ ತೆಗೆದು ಹಾಕಿಕೊಡಲಾಗುತ್ತದೆ. 1998-99ನೇ ಸಾಲಿನಲ್ಲಿ 29 ಸಾವಿರ ಶಿಕ್ಷಕರುಗಳನ್ನು ನೇಮಕಾತಿ ಮಾಡಲಿಕ್ಕೆ ಪ್ರಕ್ರಿಯೆಯನ್ನು ನಾವು ಶುರು ಮಾಡಿದ್ದೇವೆ. ತಿಪಟೂರು ತಾಲ್ಲೂಕಿನಲ್ಲಿರುವ 106 ಏಕೋಪಾಧ್ಯಾಯ ಶಾಲೆಗಳಲ್ಲಿ 40 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರುವ ಕಡೆ ಹೆಚ್ಚುವರಿಯಾಗಿ ಒಬ್ಬ ಉಪಾಧ್ಯಾಯರನ್ನು ಕೊಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. 40 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಇರುವಂಥ ಕಡೆಗೂ ಹಂತ ಹಂತವಾಗಿ ಹೆಚ್ಚುವರಿಯಾಗಿ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಪ್ರಕ್ರಿಯೆ ಮಾಡಲಾಗುತ್ತದೆ. 1998-99ನೇ ಸಾಲಿನಲ್ಲಿ ನೇಮಕ ಮಾಡಿಕೊಳ್ಳುತಕ್ಕಂಥ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡು ಎಲ್ಲಾ ಶಾಲೆಗಳನ್ನು ಬಹು ಉಪಾಧ್ಯಾಯ ಶಾಲೆಗಳನ್ನಾಗಿ ಮಾಡಲಾಗುತ್ತದೆ.

ಡಾ : ಎಂ. ಪಿ. ಕರ್ಕಿ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಯವರು ಹೇಳಿರತಕ್ಕಂಥ ಪಾಲಿಸಿ ಸರಿಯಾಗಿದೆಯೋ ಅಥವಾ ಇಲ್ಲವೋ ಎಂದು ನನಗನಿಸುತ್ತದೆ. ಏಕೋಪಾಧ್ಯಾಯ ಶಾಲೆಗಳು ಇರಲೇಬಾರದೆಂದು ಸೆಂಟ್ರಲ್ ಗೌರ್ನಮೆಂಟ್ ಪಾಲಿಸಿ ಇದೆ. ಹಾಗಾಗಿ 40 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿದ್ದರೆ ಮಾತ್ರ ಇಬ್ಬರು ಶಿಕ್ಷಕರು ಎಂದು ಹೇಳುವುದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಎಂ. ಸಿ. ನಾಣಯ್ಯ :- 14 ವರ್ಷದವರೆಗೆ ಕಡ್ಡಾಯವಾದ ಶಿಕ್ಷಣವನ್ನು ರಾಜ್ಯದಲ್ಲಿರತಕ್ಕಂಥ ಎಲ್ಲಾ ಮಕ್ಕಳಿಗೂ ಕೊಡಬೇಕೆನ್ನುವ ಹಿನ್ನೆಲೆಯಲ್ಲಿ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತಿದೆ. ಎಲ್ಲಾ ಶಾಲೆಗಳನ್ನು ಬಹು ಉಪಾಧ್ಯಾಯ ಶಾಲೆಗಳನ್ನಾಗಿ ಮಾಡುವುದಕ್ಕೆ ನಮಗೆ ಸ್ವಲ್ಪ ಸಮಯ ಬೇಕು.

ಶ್ರೀ ಜೆ. ಸಿ. ಮಾಧುಸ್ವಾಮಿ :- ಇನ್ನು ಮುಂದೆ ಏಕೋಪಾಧ್ಯಾಯ ಶಾಲೆಗಳು ಇರಬಾರದೆನ್ನುವ ಉದ್ದೇಶದಿಂದಲೇ ಬ್ಲಾಕ್ ಆಪರೇಷನ್ ಸ್ಕೀಮನ್ನು ಜಾರಿಗೆ ತರಲಾಯಿತು. ಒ.ಬಿ.ಬಿ. ಸ್ಕೀಮ್ ಈ ರಾಜ್ಯದಲ್ಲಿ ಬಂದ ಐದಾರು ವರ್ಷಗಳಾಗಿದ್ದರೂ ತಿಪಟೂರು ತಾಲ್ಲೂಕಿನಲ್ಲಿ ಇನ್ನೂ 106 ಶಾಲೆಗಳು ಏಕೋಪಾಧ್ಯಾಯ ಶಾಲೆಗಳಾಗಿಯೇ ಇವೆ. ತಿಪಟೂರು ತಾಲ್ಲೂಕಿನ ಒಂದು ಹೋಬಳಿಯನ್ನು ನಾನು ಪ್ರತಿನಿಧಿಸುತ್ತಿರುವುದರಿಂದ ಈ ವಿಷಯವನ್ನು ಹೇಳುತ್ತಿದ್ದೇನೆ, ಉಪಾಧ್ಯಾಯರುಗಳಿಲ್ಲದೆ ತಿಪಟೂರಿನಲ್ಲಿ ಆಗಿರತಕ್ಕಂಥ ಹೊಡೆತ ಬೇರೆ ಇನ್ಯಾವ ತಾಲ್ಲೂಕಿನಲ್ಲೂ ಆಗಿಲ್ಲ. ಕನಿಷ್ಟ ಪಕ್ಷ ಒ.ಬಿ.ಬಿ. ಸ್ಕೀಮ್‌ನಲ್ಲಾದರೂ ಮೇಸ್ಟರುಗಳನ್ನು ಹಾಕಿಕೊಡಬಹುದಾಗಿತ್ತು. ಆ ಸಮಯದಲ್ಲಿ ಒ.ಬಿ.ಬಿ. ಸ್ಕೀಮ್‌ನಲ್ಲಿ ಎಲ್ಲಾ ತಾಲ್ಲೂಕಿಗೆ ಮಾತ್ರ 35 ಉಪಾಧ್ಯಾಯರುಗಳನ್ನು ಕೊಡಲಾಗಿತ್ತು. ಆ ಸಮಯದಲ್ಲಿ ಕಡಿಮೆ ಸಂಖ್ಯೆಯಲ್ಲಿ ಕೊಟ್ಟಿದ್ದ ಉಪಾಧ್ಯಾಯರುಗಳನ್ನು ಗಮನಕ್ಕೆ ತೆಗೆದುಕೊಂಡು ನ್ಯಾಯವನ್ನು ಒದಗಿಸಿಕೊಡಲಾಗುತ್ತದೆಯೇ?

ಶ್ರೀ ಎಂ. ಸಿ. ನಾಣಯ್ಯ :- ಕರ್ನಾಟಕ ರಾಜ್ಯ ಯಾವ ತಾಲ್ಲೂಕಿಗೂ ಆಗದೇ ಇರತಕ್ಕಂಥ ಹೊಡೆತ ತಿಪಟೂರು ತಾಲ್ಲೂಕಿಗೆ ಆಗಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದರ ಬಗ್ಗೆ ವಿಚಾರ ಮಾಡಲಿಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ.